# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ.ವಿ.ಎನ್. ಮಲ್ಲೇಶ್, ಕಾರ್ಯದರ್ಶಿ, ಸಂತೇಶಿವರ ಗ್ರಾಮ ಪಂಚಾಯಿತ್ ಕಾರ್ಯಾಲಯ, ಚಿಕ್ಕೋನಹಳ್ಳಿ ಗೇಟ್, ನುಗ್ಗೇನಹಳ್ಳಿ ಹೋಬಳಿ,ಚನ್ನರಾಯಪಟ್ಟಣ ತಾಲೂಕ್, ಹಾಸನ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/Uplok/ MYS-8729/2015/DRE-5 ದಿನಾಂಕ: 20.05.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 12.05.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ದೂರುದಾರರಾದ ಶೀರಾಮಲಿಂಗ ತಂದೆ ಲೇಟ್॥ ನಂಜಪ ನವಿಲೆ,ಬೋವಿ ಕಾಲೋನಿ,ಬಾಗೂರು ಹೋಬಳಿ, ಚನ್ನರಾಯ ಪಟ್ಟಣ ತಾಲೂಕ್,ಹಾಸನ ಜಿಲ್ಲೆ ವಾಸಿ ರವರು ಶ್ರೀ ವಿ.ಎನ್.ಮಲ್ಲೇಶ್, ಕಾರ್ಯದರ್ಶಿ, ಸಂತೇಶಿವರ ಗ್ರಾಮ ಪಂಚಾಯತ್ ಕಾರ್ಯಾಲಯ, ಚಿಕ್ಕೋನಹಳ್ಳಿ ಗೇಟ್,ನುಗ್ಗೇನಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲೂಕ್,ಹಾಸನ ಜಿಲ್ಲೆ ರವರ ವಿರುದ್ಧ ಸಾರ್ವಜನಿಕ ನೌಕರರಾಗಿ, ಕೆಲಸದ ಸಂಬಂಧ ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ನೀಡಿದ ದೂರಿನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ,ಎದುರುದಾರರ ವಿರುದ್ಧ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಲಾಗಿದೆ.

ಪ್ರಕರಣ ಸಂಕ್ಷಿಪ್ತ ಸಾರಾಂಶ:-

- ಎದುರುದಾರರಾದ ಶ್ರೀ ವಿ.ಎನ್.ಮಲ್ಲೇಶ್ ಇವರು ನವಿಲೆ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಗ ನಮ್ಮ ತಾಯಿ ಹೆಸರಿನಲ್ಲಿದ್ದ ಜಾಗದಲ್ಲಿ 3 ಜನ ಗಂಡು ಮಕ್ಕಳು ಸೇರಿ ಒಂದು ಆರ್.ಸಿ.ಸಿ. ಬಿಲ್ಡಿಂಗ್ ಕಟ್ಟಿರುತ್ತಾರೆ. ಯಾವುದೇ ದಾಖಲೆಗಳು ಇಲ್ಲದೇ ಅದನ್ನು ತನ್ನ ಹೆಂಡತಿಯ ಹೆಸರಿಗೆ ಮಾಡಿದ್ದಾರೆ. ನವಿಲೆ ಗ್ರಾಮ ಪಂಚಾಯತಿ ಕಛೇರಿಯಲ್ಲಿ ಕೇಳಿದಾಗ ಕರ ನಿರ್ಧಾರ ತೆರಿಗೆ ಬೇಡಿಕೆ ಬದಲಾವಣೆ ಆದ ಬಗ್ಗೆ ಮಾಹಿತಿ ಲಭ್ಯವಿಲ್ಲ ಅಂತ ಹೇಳಿದ್ದಾರೆ. ಆದ್ದರಿಂದ ದೂರುದಾರರು ಎದುರುದಾರರ ವಿರುದ್ದ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

ಎದುರುದಾರರಿಂದ ದೂರಿನ ಮೇಲೆ ಆಕ್ಷೇಪಣೆಗಳನ್ನು ಕೇಳಲಾಗಿದೆ.1ನೇ ಎದುರುದಾರರು ತನ್ನ ತಕರಾರಿನಲ್ಲಿ ನಾವು ನಮ್ಮ ತಾಯಿಗೆ 6 ಜನ ಮಕ್ಕಳಿದ್ದು,ನಮ್ಮ ಅಕ್ಕ ಗೌರಮ್ಮ 20 ವರ್ಷ ನಮ್ಮ ಜೊತೆಯಲ್ಲಿಯೇ ವಾಸವಾಗಿದ್ದಾರೆ.ತನ್ನ ಮಗಳನ್ನು ಮದುವೆಯಾಗಲು ಒತ್ತಾಯಿಸಿದಾಗ ನಾನು ಎತ್ತಿಕೊಂಡಿರುವ ಮಗು ಅಂತ ಅವಳನ್ನು ಮದುವೆ ಆಗಲಿಲ್ಲ.ಇದೊಂದೇ ಕಾರಣಕ್ಕೆ ನನಗೆ ಮಾನಸಿಕ ತೊಂದರೆ ಕೊಡುತ್ತಿದ್ದಾರೆ. ಊರು ಒಳಗಿನ ನಿವೇಶನದಲ್ಲಿ ಅವರವರು ಮನೆ ಕಟ್ಟಿಕೊಳ್ಳಲು ಊರಾಚೆ ಇರುವ ಕೊಪ್ಪಲಲ್ಲಿ ನಾನು ಮನೆ ಕಟ್ಟಿಸಿಕೊಳ್ಳಲಿ ಅಂತ ಎಲ್ಲಾರೂ ಒಪ್ಪಿಕೊಂಡ ನಂತರ ಮನೆಗಳನ್ನು ಕಟ್ಟಲಾಗಿದೆ.ನಮ್ಮ ತಾಯಿಯ ಹೆಸರಿಗೆ ತೋಟ ಮತ್ತು ತೆಂಗಿನ ಮರಗಳಿವೆ. ಒಂದು ನಿವೇಶನ ಸಹ ಇದೆ.ಇದನ್ನೆಲ್ಲಾ ದೂರುದಾರರು ಅನುಭವಿಸುತ್ತಿದ್ದಾರೆ. ದೂರುದಾರರು ಶ್ರೀಮತಿ ಜಯಮ್ಮ, ಶಿಶು ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿಯವರ

ಹತ್ತಿರ ಭಾಗ್ಯಲಕ್ಷ್ಮೀ ಬಾಂಡಿನ ಸಲುವಾಗಿ ದೂರು ಕೊಟ್ಟಿದರು.ಅದರಲ್ಲಿ ತೀರ್ಮಾನವು ಆಗಿತ್ತು.ಈಗಾ ವನಃ ಕಾರಣ ತೊಂದರೆ ಕೊಟ್ಟು ತನ್ನ ಹೆಂಡತಿಯ ಮೇಲೆ ದೂರು ಕೊಟ್ಟಿದ್ದಾರೆ ಅಂತ ಆಕ್ಷೇಪಣೆ ಸಲ್ಲಿಸಿದ್ದಾರೆ.

ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಎದುರುದಾರರು ಸಣ್ಣ ಕೆಲಸದಲ್ಲಿದ್ದು, ಸಂಬಳದ ಗಳಿಕೆಗಿಂತ ಹೆಚ್ಚಿನ ಆಸ್ತಿ–ಪಸ್ತಿ ಮಾಡಿದ್ದಾರೆ ಅಂತ ದೂರುದಾರರು ಎ.ಸಿ.ಬಿಯಲ್ಲಿ ಮಾತ್ರ ದೂರು ಸಲ್ಲಿಸಲು ಬರುತ್ತದೆ. 1ನೇ ಎದುರುದಾರರ ತಾಯಿಯ ಹೆಸರಿನಲ್ಲಿದ್ದ ನಿವೇಶನ 1ನೇ ಎದುರುದಾರರಿಗೆ ಹೇಗೆ ಬಂದಿದೆ ಅನ್ನಲು ಯಾವುದೇ ದಾಖಲಾತಿಗಳಿಲ್ಲ, ಮಾಹಿತಿ ಲಭ್ಯವಿಲ್ಲ ಅಂತ ಪಂಚಾಯತಿ ತಿಳಿಸಿದೆ. ಆದರೆ,1ನೇ ಎದುರುದಾರರ ಪ್ರಕಾರ ತನ್ನ ತಾಯಿ ಹೇಳಿದಂತೆ ಊರಿನ ಹೊರಗಡೆಯ ಕೊಪ್ಪಲ್ಲಿ ಅವರು ಮನೆ ಕಟ್ಟಿಕೊಂಡಿದ್ದಾರೆ. ಶ್ರೀಮತಿ ಗೌರಮ್ಮ ಎನ್ನುವವರಿಗೆ ಒಂದು ಮನೆ ಇದೆ ದೂರುದಾರರ ತಾಯಿಗೂ ಸಹ ಒಂದು ನಿವೇಶನ ಇದೆ. ಜಯಮ್ಮ ಎನ್ನುವವರು ಚುಚ್ಚುಮದ್ದಿನ ಕಾರ್ಡ್ ಇಲ್ಲದೇ ಇದರಿಂದ ಕಂಡುಬರುತ್ತದೆ. ಈ ಬಗ್ಗೆ ಈಗಾಗಲೇ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,ಚನ್ನರಾಯಪಟ್ಟಣ ಇವರ ಮುಂದೆ ವಿಚಾರಣೆ ಸಹ ಆಗಿದೆ.ಆದ್ದರಿಂದ 2ನೇ ಎದುರುದಾರರ ಕರ್ತವ್ಯ ಲೋಪಗಳು ಕಂಡುಬರುತ್ತಿಲ್ಲ.

ಎದುರುದಾರರು ತನ್ನ ತಾಯಿಯ ಹೆಸರಿನಲ್ಲಿದ್ದ ನಿವೇಶನ ಸಂಖ್ಯೆ:95ಇದನ್ನು ತನ್ನ ಹೆಂಡತಿಯ ಹೆಸರಿಗೆ ಮಾಡಿಸುವಾಗ ಯಾವುದೇ ದಾಖಲೆಗಳಿಲ್ಲದೇ,ಕರ ನಿರ್ಧಾರಣ ವಹಿಯಲ್ಲಿ ತಿದ್ದುಪಡಿ ಮಾಡಿದ್ದಾರೆ. ಆ ಸಮಯದಲ್ಲಿ ಅವರು ನವಿಲೆ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಅಲ್ಲಗಳೆದಿಲ್ಲ.ಈ ರೀತಿಯ ಬದಲಾವಣೆ ಮಾಡಿ ಕರ್ತವ್ಯಲೋಪವೆಸಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ '1ನೇ ಎದುರುದಾರರಾದ ಶ್ರೀ ವಿ. ಎನ್.ಮಲ್ಲೇಶ, ಕಾರ್ಯದರ್ಶಿ' ಇವರ ವಿರದ್ಧ ಇಲಾಖಾ ವಿಚಾರಣೆ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಕಂಡುಬಂದಿದ್ದು, 'ಎದುರುದಾರರು' ಸರ್ಕಾರಿ ಸೇವಕರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಮತ್ತು ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿಸರುವುದು ವೇದ್ಯವಾಗಿರುತ್ತದೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀ.ವಿ ಎನ್. ಮಲ್ಲೇಶ್, ಕಾರ್ಯದರ್ಶಿ,ಸಂತೇಶಿವರ ಗ್ರಾಮ ಪಂಚಾಯತ್ ಕಾರ್ಯಾಲಯ, ಚಿಕ್ಕೋನಹಳ್ಳಿ ಗೇಟ್, ನುಗ್ಗೇನಹಳ್ಳಿ ಹೋಬಳಿ,ಚನ್ನರಾಯಪಟ್ಟಣ ತಾಲೂಕ್, ಹಾಸನ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ ನಿಯಮ 3(1)(ii) ಮತ್ತು (iii) ರಲ್ಲಿ ಅಡಿಯಲ್ಲಿ ದರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/491/ಗ್ರಾಪಂಕಾ/2017 ಬೆಂಗಳೂರು, ದಿನಾಂಕ-12-07-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ.ವಿ.ಎನ್.ಮಲ್ಲೇಶ್, ಕಾರ್ಯದರ್ಶಿ, ಸಂತೇಶಿವರ ಗ್ರಾಮ ಪಂಚಾಯತ್ ಕಾರ್ಯಾಲಯ, ಚಿಕ್ಕೋನಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲೂಕ್, ಹಾಸನ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 79 ರವರೆಗಿನ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.
6. ಶ್ರೀ.ವಿ.ಎನ್.ಮಲ್ಲೇಶ್. ಕಾರ್ಯದರ್ಶಿ, ಸಂತೇಶಿವರ ಗ್ರಾಮ ಪಂಚಾಯತ್ ಕಾರ್ಯಾಲಯ, ಚಿಕ್ಕೋನಹಳ್ಳಿ ಗೇಟ್, ನುಗ್ಗೇನಹಳ್ಳಿ ಹೋಬಳಿ, ಚನ್ನರಾಯಪಟ್ಟಣ ತಾಲೂಕ್ ಹಾಸನ ಜಿಲ್ಲೆ
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.